ಕಾನೂನು ಪ್ರಕಾರದಿಂದಲೂ ಆಗುವುದಿಲ್ಲ. ನಾನು ಸಭೆಯನ್ನು ಕರೆದರೂ, ಕಾನೂನಿನ ವಿರುದ್ಧವಾಗಿ ಮಾಡುವುದಕ್ಕೆ ನನಗೆ ಆಗುವುದಿಲ್ಲ.

ಅಧ್ಯಕ್ಷರು:- ಮಾನ್ಯ ಫೋರ್ಪಡೆಯವರೇ, ತಾವು ಒಂದು ಮೀಟಿಂಗ್ ಅನ್ನು ಕರೆಯಿರಿ,

ಶ್ರೀ ಡಿ.ವಿ. ಸದಾನಂದಗೌಡ:- ಮಾನ್ಯ ಅಧ್ಯಕ್ಷರೇ, ಸಭೆಯನ್ನು ಕರೆಯುವುದಕ್ಕೆ ಆಗುವುದಿಲ್ಲವೆಂದು ಅವರು ತಮಗೆ ಹೇಳುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ನಮ್ಮ ಸಲಹೆ ಸೂಚನೆಗಳನ್ನಾದರೂ ಕೇಳಬೇಕಲ್ಲಾ..

ಅಧ್ಯಕ್ಷರು:- ಮಾನ್ಯ ಮಂತ್ರಿಯವರೇ, ದಯವಿಟ್ಟು ರೂಮ್ ನಂಬರ್:106 ರಲ್ಲಿ ಒಂದು ಮೀಟಿಂಗ್ ಕರೆಯಿರಿ, ಅವರ ಕಷ್ಟ ಸುಖಗಳನ್ನು ಕೇಳೋಣ, ಆಮೇಲೆ ಒಂದು ತೀರ್ಮಾನವನ್ನು ತೆಗೆದುಕೊಳ್ಳೋಣ, ನಾನು ಮೀಟಿಂಗ್ ಕರೆಸುತ್ತೇನೆ.

(ಈ ಹಂತದಲ್ಲಿ ಬಿ.ಜೆ.ಪಿ.ಯ ಕೆಲವು ಸದಸ್ಯರುಗಳು, ಜನತಾ ದಳ (ಯು) ಜನತಾ ದಳ(ಎಸ್)ನ ಕೆಲವು ಸದಸ್ಯರುಗಳು ಸದನದ ಬಾವಿಗೆ ಬಂದರು)

(ಗೊಂದಲ)

ಶ್ರೀ ಡಿ.ವಿ.ಸದಾನಂದ ಗೌಡ:- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರಿಗೆ, ನೀವು ಮೀಟಿಂಗ್ ಕರೆಯಿರಿ, ಎಂದು ಹೇಳಿದಿರಿ, ಆದರೆ ಮಾನ್ಯ ಮಂತ್ರಿಯವರು ಮೀಟಿಂಗ್ ಅನ್ನು ಕರೆಯುವುದಕ್ಕೆ ತಯಾರಿಲ್ಲವೆಂದು ಹೇಳುತ್ತಿದ್ದಾರೆ, ಅವರು ನೋ ನೋ.. ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು:- ಅದು ತಪ್ಪಾಗುತ್ತದೆ.

(ಗೊಂದಲ)

ಶ್ರೀ ಡಿ.ವಿ.ಸದಾನಂದ ಗೌಡ:- ಮಾನ್ಯ ಅಧ್ಯಕ್ಷರೇ, ತಮ್ಮ ಆದೇಶದ ಪ್ರಕಾರ ಮೀಟಿಂಗ್ ಕರೆಯಿರಿ ಎಂದರೆ;

ಅಧ್ಯಕ್ಷರು:- ಮಾನ್ಯ ಫೋರ್ಪಡೆಯವರೇ, ತಾವು ದಯಮಾಡಿ ಒಂದು ಮೀಟಿಂಗ್‌ನ್ನು ರೂಮ್ ನಂ. 106ರಲ್ಲಿ ಕರೆಯಿರಿ, I request you to call for MLAs meeting. ಲೆಜಿಸ್ಲೇಟರ್ಸ್ ಮೀಟಿಂಗ್ ಅನ್ನು ಕರೆಯಿರಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ಇಲ್ಲಿ ಇವತ್ತು ಅಧಿಕಾರ ವಿಕೇಂದ್ರೀಕರಣವನ್ನು ಒಪ್ಪಿಕೊಳ್ಳುತ್ತೇವೆ, ಆದರೆ ಎರಡು ಲಕ್ಷ ಮತದಾರರನ್ನು ಪ್ರತಿನಿಧಿಸುವಂತಹ ಜನಪ್ರತಿನಿಧಿಗಳು ಅಂದರೆ ಶಾಸಕರು, ಅವರ ಸಲಹೆ ಸೂಚನೆಗಳನ್ನು ಕೇಳುವಂಥಾದ್ದು ಇಲ್ಲ, ಅವರ ವರ್ಕ್ ಯಾವುದು ಆಗುತ್ತಾ ಇಲ್ಲ. ಇವತ್ತು ಯಾವುದೋ ಒಂದು ಕ್ರಿಯಾ ಯೋಜನೆಯನ್ನು ಮಾಡುತ್ತಾರೆ, ಆ ಕ್ರಿಯಾ ಯೋಜನೆಯನ್ನು ಮಾಡುವಂತಹ ಸಂದರ್ಭಗಳಲ್ಲಿ ಜಡ್.ಪಿ.ಮೆಂಬರ್ಸ್ ಅನ್ನು ಯಾವ ರೀತಿಯಾಗಿ ಕನ್‌ಸಲ್ಟೇಶನ್ ಮಾಡುತ್ತಾರೆ, ಇವತ್ತು ಶಾಸಕರನ್ನು ಅದೇ ರೀತಿಯಾಗಿ ಕನ್‌ಸಲ್ಟೇಶನ್ ಮಾಡುವಂಥಾದ್ದು ಆಗಬೇಕು. ಇಲ್ಲಿ ಯಾವುದು ಸರಿ, ಯಾವುದು ತಪ್ಪು, ಯಾವ ಕಾಮಗಾರಿ ಮಾಡಬೇಕು, ಯಾವುದು ಬೇಡವೆನ್ನುವಂಥಾದ್ದನ್ನು, ಕೇಳುವುದಕ್ಕೆ ಸೌಜನ್ಯವಿಲ್ಲವೆಂದರೆ, ನಾವು ಯಾವ ರೀತಿಯಾಗಿ ಕೆಲಸ ಮಾಡಬೇಕು? ಅದಕ್ಕಾಗಿ ಮಾನ್ಯ